ಎಂವಿಸಿ.ನಂ 299/2024 ಆರ್‌ಡಬ್ಲೂಃ 2

ದಿನಾಂಕಃ 09-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರವಾಗಿಃ ಶ್ರೀ ವಾಯ್ ವಿ ಎಸ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ಅಥೋರೈಜೇಶನ್ ಲೇಟರನ್ನು ನಿಆರ್-4 ಎಂದು, ಪಾಲಿಸಿ ಕಾಪಿಯನ್ನು ನಿಆರ್-5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಎಮ್ ಡಿ ಆರ್ ವಕೀಲರಿಂದ :**

3. ನನ್ನ ಮುಖ್ಯ ವಿಚರಣಾ ಪ್ರಮಾಣ ಪತ್ರ ಹಾಗೂ ನಾವು ನಾಯಾಲಯಕ್ಕೆ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ನಮ್ಮ ಮಾಹಿತಿ ಪ್ರಕಾರ ವಾಹನ ಸಂಖ್ಯೆ ಕೆಎ/47-9764 ವಾಹನದ ಮಾಲೀಕರ ಹೆಸರು ನೆನಪಿಲ್ಲ. ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ ನಂತರ ವಾಹನದ ಮಾಲೀಕರ ಬಗ್ಗೆ ಮಾಹಿತಿಯನ್ನು ತಿಳಿದುಕೊಳ್ಳದೇ ಆಕ್ಷೇಪಣೆ ಪತ್ರ ಸಲ್ಲಿಸಿರುತ್ತೇವೆ ಎಂದರೆ ನೆನಪಿಲ್ಲ . ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲೂ ಕೂಡ ಈ ದಿನ ವಾಹನದ ಮಾಲೀಕರು ಯಾರು ಆಗಿದ್ದರು ಎಂದು ಮಾಹಿತಿ ತಿಳಿದಕೊಂಡು ನಾನು ಮಾಹಿತಿಯನ್ನು ಕೊಟ್ಟಿಲ್ಲ . ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಪಟ್ಟಂತಾಗಲೀ, ವಾಹನ ಡ್ಯಾಮೇಜ್ ಗೆ ಸಂಬಂಧಪಟ್ಟಂತಾಗಲೀ ಯಾವುದೇ ಕಾಗದ ಪತ್ರಗಳನ್ನು ಪರಿಶೀಲನೆ ಮಾಡಿ ನಾನು ಮಾಹಿತಿಯನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿ ವಾಹನದ ಡ್ಯಾಮೇಜ್ ಬಗ್ಗೆ ನಮಗೆ ಯಾವುದೇ ರಿಪೋರ್ಟ ಆಗಿಲ್ಲ ಎಂದು ನುಡಿದಿರುತ್ತಾರೆ . ನಾವು ಖಾಸಗಿ ತನಿಖೆಯನ್ನು ಕೈಗೊಂಡಿದ್ದರೆ ಮತ್ತು ಅಪಘಾತಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಪಡೆದುಕೊಂಡಿದ್ದರೆ ಅದನ್ನು ನ್ಯಾಯಾಲಯಕ್ಕೆ

ಹಾಜರು ಪಡಿಸುತ್ತಿದ್ದೆವು ಎಂದರೆ ಸಾಕ್ಷಿ ಹಾಜರು ಪಡಿಸುತ್ತೇವೆ ಎಂದು ನುಡಿದಿರುತ್ತಾರೆ . ಈ ಪ್ರಕರಣದಲ್ಲಿ ಅರ್ಜಿಯಲ್ಲಿ ಕೇಳಿದಂತಹ ವಾಹನದ ಡ್ಯಾಮೇಜಸ್ ಕೊಡಲು ತೊಂದರೆ ಇದೆಯಾ ಎಂದರೆ ಸಾಕ್ಷಿ ವಾಹನ ರಿಪೇರಿ ಆಗುವ ಮೊದಲು ನಮಗೆ ಅಪ್ಲಿಕೇಶನ್ ಫಾರ್ಮ ಕೊಡಬೇಕು ಹಾಗೂ ಎಸ್ಟಿಮೇಶನ್ ಕೊಡಬೇಕು ಆವಾಗ ಮಾತ್ರ ನಾವು ಮುಂದುವರೆಸುತ್ತೇವೆ, ಈಗ ವಾಹನ ರಿಪೇರಿ ಆಗಿದೆ ಕಾರಣ ಪರಿಹಾರ ಕೊಡಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ . ಭವಾನಿ ಶಂಕರ ಇವರು ಡ್ಯಾಮೇಜ್ ಸ ವ್ಯೆಲ್ಯುವೇಶನ್ ಮಾಡಿಕೊಡುವ ಸರ್ವೆಯರ್ ಎಂದರೆ ಸರಿ . ಭವಾನಿ ಶಂಕರ ಯಾವುದೇ ಸರ್ವೆಗೆ ಹೋಗಬೇಕಾದರೆ ನಮ್ಮ ಮಾಹಿತಿ ಮುಖಾಂತರ ಹೊಗುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಮಾಹಿತಿ ಕೊಟ್ಟರೆ ಮಾತ್ರ ಹೋಗುತ್ತಾರೆ ಎಂದು ನುಡಿದಿರುತ್ತಾರೆ . ನಿಮ್ಮ ಪಾಲಿಸಿ ಟರ್ಮ್ಸ ಮತ್ತು ಕಂಡಿಶನ್ ಪ್ರಕಾರ ಲಿಖಿತ ಮತ್ತು ಮೌಖಿಕ ಮಾಹಿತಿಯನ್ನು ಕೊಡಬೇಕೆಂಬ ಶರತ್ತು ಇಲ್ಲ ಎಂದರೆ ಸರಿಯಲ್ಲ . ನಾವು ಮೌಖಿಕ ಮಾಹಿತಿಯನ್ನು ಸ್ವೀಕಾರ ಮಾಡುತ್ತೇವೆ ಎಂದರೆ ಸರಿಯಲ್ಲ. ಪಾಲಿಸಿ ಟರ್ಮ್ಸ ಮತ್ತು ಕಂಡಿಶನ್ ನಲ್ಲಿ ಲಿಖಿತ ಮಾಹಿತಿಯನ್ನೇ ಕೊಡಬೇಕು ಎಂದು ಯಾವುದೇ ಶರತ್ತು ಇಲ್ಲ ಎಂದರೆ ಸರಿ . ಮೌಖಿಕ ಮಾಹಿತಿಯನ್ನು ಕೊಟ್ಟಾಗ ವಾಹನದ ಮಾಲೀಕರ ಬಳಿ ಮಹಿತಿ ನೀಡಿದ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿ . ಈ ಪ್ರಕರಣದಲ್ಲಿ ವಾಹನ ರಿಪೇರಿಯಾಗುವ ಪೂರ್ವದಲ್ಲಿ ವಾಹನದ ಮಾಲೀಕರು ನಮ್ಮ ಕಚೇರಿಗೆ ಬಂದು ಸಂಪೂರ್ಣ ಮೌಖಿಕ ವಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ . ಅವರು ಮಾಹಿತಿ ನೀಡಿದ ನಂತರ ನಾವು ಭವಾನಿ ಶಂಕರ ರವರಿಗೆ ಮಾಹಿತಿ ನೀಡಿ ಅವರು ವಾಹನವನ್ನು ಪರಿಶೀಲನೆ ಮಾಡಿ ಅವರು ನಮಗೆ ವರದಿಯನ್ನು ಕೂಡ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ನೀಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ತಕರಾರು ಹಾಗೂ ಪ್ರಮಾಣ ಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ಎಸ್ ಎಮ್ ಬಿ ವಕೀಲರಿಂದ :</u>**

4. ನಾವು ಇನ್ಸುರೆನ್ಸ ನೀಡಿದ ವಾಹನಕ್ಕೆ ಅಪಘಾತ ಸಮಯದಲ್ಲಿ ಪ್ರದೀಪ ಶ್ರೀಧರ ನಾಯ್ಕ ಇವರು ವಾಹನ ಚಾಲಕರಾಗಿದ್ದರು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ 2 ನೇ ಪುಟ 1 ನೇ ಪ್ಯಾರಾದಲ್ಲಿರುವ ಅಂಶಗಳಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಸಾಕ್ಷಿಗೆ ನಿಆರ್ –1 ತೋರಿಸಲಾಗಿ ಎಫ್ ಐ ಆರ್ ಎಂದು ನೋಡಿ ಗುರುತಿಸಿರುತ್ತಾರೆ. ಸದರಿ ಎಫ್ ಐ ಆರ್ ಕುಮಟಾ ಪೋಲಿಸ್ ಠಾಣೆಯದ್ದಾಗಿದ್ದು ಕ್ರೈಮ್ ನಂ. 37/2024 ಆಗಿರುತ್ತದೆ. ಸದರಿ ಎಫ್ ಐ ಆರ್ ನ್ನು ಪ್ರದೀಪ ಶ್ರೀಧರ ನಾಯ್ಕರವರ ವಿರುದ್ಧ ದಾಖಲಾಗಿರುತ್ತದೆ. ನಾವು ಇನ್ಸುರೆನ್ಸ ನೀಡಿದ ವಾಹನದ ಚಾಲಕನ ವಿರುದ್ಧ ಕುಮಟಾ ಪೋಲಿಸರು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿ ಕೊಡುವಾಗ ನಾನು ಈ ದಾಖಲಾತಿ ನೋಡಿಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ತಯಾರಿಸುವ ಪೂರ್ವದಲ್ಲಿ ನಮ್ಮ ಇನವೆಸ್ಟಿಗೇಟರ ಬಳಿ ದಾಖಲಾತಿಗಳನ್ನು ತರಿಸಿಕೊಂಡಿದ್ದೆವು. ನಮ್ಮ ವಾಹನದ ಚಾಲಕನ ಮೇಲೆ ಎಫ್ ಐ ಆರ್ ಆಗಿಲ್ಲ. ಕಾರ ಚಾಲಕನ ಮೇಲೆ ಮಾತ್ರ ಪೋಲಿಸರು ಕೇಸನ್ನು ದಾಖಲಿಸಿದ್ದಾರೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಮ್ಮಲ್ಲಿರುವ ದಾಖಲಾತಿಗಳ ಪ್ರಕಾರ ಕಾರ ಚಾಲಕನ ಮೇಲೆ ಮಾತ್ರ ಕೆಸ್ ದಾಖಲಾಗಿದೆ ಎಂದು ನುಡಿದಿರುತಾರೆ. ನಾವು ಪಾಲಿಸಿ ನೀಡಿದ ವಾಹನದ ಚಾಲಕನ ವಿರುದ್ಧ ಪೋಲಿಸರು ತನಿಖೆ ಮಾಡಿ ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಮಾಹಿತಿ ಇಲ್ಲ. ಆ ವಿಷಯ ಗೊತ್ತಿದ್ದರೂ ಕೂಡ ಬುದ್ಯಾ ಮುಚ್ಚಿಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1(ಎ) ಮತ್ತು 1(ಬಿ) ನೇ ಎದುರುದಾರರ ಪರಃ ಶ್ರೀ ಬಿ ಎಸ್ ಯು ವಕೀಲರಿಂದ :**

1(ಎ) ಮತ್ತು 1(ಬಿ) ವಕೀಲರನ್ನು ಕೂಗಿ ಕರೆಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.